# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **873** |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| ಪ್ರಶ್ನೆ | | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಕುದರಗುಂಡಿ ಸೇರಿದಂತೆ ವಿವಿಧ ಗ್ರಾಮಗಳ ರೈತರು ತಮ್ಮ ಜಮೀನುಗಳ ಮೇಲೆ ಹಾದು ಹೋಗಿರುವ ಹೈ-ಟೆನ್ಷನ್ ವಿದ್ಯುತ್ ತಂತಿಗಳು ಪ್ರಸರಣ ಮಾರ್ಗಕ್ಕೆ ಈವರೆವಿಗೂ ಪರಿಹಾರ ನೀಡಿಲ್ಲ ಎಂದು ಆರೋಪಿಸಿ ಪ್ರತಿಭಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಕುದುರುಗುಂಡಿ ಗ್ರಾಮದಲ್ಲಿ ಸುಮಾರು 119 ಸಂಖ್ಯೆಯ ರೈತರ ಜಮೀನುಗಳ ಮೇಲೆ ಕ.ವಿ.ಪ್ರ.ನಿ.ನಿ.ಯ 220 ಕೆವಿ ಸಾಮರ್ಥ್ಯದ ಕೊತ್ತಿಪುರ-ತೂಬಿನಕೆರೆ ಜೋಡಿ ವಿದ್ಯುತ್ ಮಾರ್ಗವು ಹಾದು ಹೋಗಿರುತ್ತದೆ. ಸದರಿ ಮಾರ್ಗದ ಉದ್ದವು 2.2 ಕಿ.ಮೀ. ಆಗಿರುತ್ತದೆ.<br><br>220 ಕೆವಿ ಕೊತ್ತಿಪುರ-ತೂಬಿನಕೆರೆ ಜೋಡಿ ವಿದ್ಯುತ್ ಮಾರ್ಗದಲ್ಲಿ ಬರುವ ಕುದರಗುಂಡಿ ಗ್ರಾಮದ ರೈತರಿಗೆ ಒಟ್ಟು ರೂ.64.50 ಲಕ್ಷ ಪರಿಹಾರ ಪೈಕಿ ರೂ.46.50 ಲಕ್ಷಗಳು ಪಾವತಿ ಮಾಡಲಾಗಿರುತ್ತದೆ! ಜಮೀನಿನ ವ್ಯಾಜ್ಯ / ದಾವೆ/ ಮೊಕದ್ದಮೆ/ ತಕರಾರು ಇರುವುದರಿಂದ ಭೂ ಸರ್ವೇ ಕಾರ್ಯ ಆಗದೇ ಇರುವ ಹಿನ್ನೆಲೆಯಲ್ಲಿ ರೂ.18.00 ಲಕ್ಷಗಳು ಪರಿಹಾರ ಪಾವತಿಸಲು ಬಾಕಿ ಇರುತ್ತದೆ. |
| ಆ) | ಎಷ್ಟು ರೈತರ ಜಮೀನುಗಳ ಮೇಲೆ ಹೈ-ಟೆನ್ಷನ್ ವಿದ್ಯುತ್ ತಂತಿಗಳ ಪ್ರಸರಣ ಮಾರ್ಗ ಹಾದುಹೋಗಿದೆ; ಹಾಗೂ ಇದರ ಉದ್ದ ಎಷ್ಟು; ವೋಲ್ಟೇಜ್ ಮಾರ್ಗದ ಸಾಮರ್ಥ್ಯ ಏನು? (ಸಂಪೂರ್ಣ ಮಾಹಿತಿ ನೀಡುವುದು) | |
| ಇ) | ರೈತರಿಗೆ ಪಾವತಿಸಬೇಕಿರುವ ಪರಿಹಾರ ಮೊತ್ತ ಎಷ್ಟು; ಈ ಪೈಕಿ ಪಾವತಿಸಿರುವ ಹಾಗೂ ಬಾಕಿ ಇರುವ ಮೊತ್ತ ಎಷ್ಟು; ಪರಿಹಾರದ ಮೊತ್ತ ವಿತರಿಸದೇ ಇದ್ದಲ್ಲಿ ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | |

| | | |
|---|---|---|
| ಈ) | ಕೆಲವು ರೈತರಿಗೆ ಮರಗಳನ್ನು ನಾಶ ಮಾಡಿದ ಪರಿಹಾರಕ್ಕಾಗಿ ನೀಡಿದ್ದ ಚೆಕ್‌ಗಳು ಬೌನ್ಸ್ ಆಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದ್ದು, ರೈತರಿಗೆ ಸೂಕ್ತ ಪರಿಹಾರ ನೀಡಲು ಸರ್ಕಾರದ ನಿಲುವೇನು; | ಕ.ವಿ.ಪ್ರ.ನಿ.ನಿ. ವತಿಯಿಂದ ಪರಿಹಾರಕ್ಕಾಗಿ ನೀಡಿರುವ ಯಾವುದೇ ಚೆಕ್‌ಗಳು ಬೌನ್ಸ್ ಆಗಿರುವುದಿಲ್ಲ. |
| ಉ) | ಮಂಡ್ಯ ಜಿಲ್ಲೆಯಲ್ಲಿ ರೈತರ ಜಮೀನುಗಳ ಮೇಲೆ ಹಾದುಹೋಗಿರುವ ಹೈ-ಟೆನ್ಶನ್ ವಿದ್ಯುತ್ ತಂತಿಗಳ ಪ್ರಸರಣ ಮಾರ್ಗಗಳ ಸಂಖ್ಯೆ ಎಷ್ಟು; ಯಾವುವು; ವೋಲ್ಟೇಜ್ ಮಾರ್ಗದ ಸಾಮರ್ಥ್ಯ ಏನು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಮಂಡ್ಯ ಜಿಲ್ಲೆಯಲ್ಲಿ ರೈತರ ಜಮೀನುಗಳ ಮೇಲೆ ಹಾದು ಹೋಗಿರುವ 220 ಕೆ.ವಿ ಮತ್ತು 66 ಕೆ.ವಿ ವೋಲ್ಟೇಜ್ ಸಾಮರ್ಥ್ಯದ ಪ್ರಸರಣ ಮಾರ್ಗಗಳ ತಾಲ್ಲೂಕುವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಊ) | ಮಂಡ್ಯ ಜಿಲ್ಲೆಯಲ್ಲಿ ಪರಿಹಾರ ವಿತರಿಸಬೇಕಿರುವ ಭೂಮಾಲೀಕರ ಸಂಖ್ಯೆ ಎಷ್ಟು; ಹಾಗೂ ಪಾವತಿಸಲು ಬಾಕಿಯಿರುವ ಮೊತ್ತ ಎಷ್ಟು; ಯಾವ ಕಾಲಮಿತಿಯೊಳಗೆ ಪರಿಹಾರ ಧನವನ್ನು ನೀಡಲಾಗುವುದು? (ತಾಲ್ಲೂಕುವಾರು ಮಾಹಿತಿ ನೀಡುವುದು) | ಮೈಸೂರು ಪ್ರಸರಣ ವಲಯ, ಕವಿಪ್ರನಿನಿ ವ್ಯಾಪ್ತಿಯ ಮಂಡ್ಯ ಜಿಲ್ಲೆಯಲ್ಲಿ ಪ್ರಸ್ತುತ, ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಪರಿಹಾರ ವಿತರಿಸಲು ಯಾವುದೇ ಬಾಕಿ ಇರುವುದಿಲ್ಲ.<br><br>ಬೆಂಗಳೂರು ಪ್ರಸರಣ ವಲಯ, ಕಛೇರಿ ನಿಯಂತ್ರಣದಲ್ಲಿರುವ ಮಂಡ್ಯ ಜಿಲ್ಲೆ ವ್ಯಾಪ್ತಿಯ 220 ಕೆವಿ ಸಾಮರ್ಥ್ಯದ ಕೊತ್ತಿಪುರ-ತೂಬಿನಕೆರೆ ಜೋಡಿ ವಿದ್ಯುತ್ ಮಾರ್ಗವು ಮಂಡ್ಯ ಜಿಲ್ಲೆಯ ಮದ್ದೂರು, ಶ್ರೀರಂಗಪಟ್ಟಣ, ಮಂಡ್ಯ ತಾಲ್ಲೂಕಿನ ಮೇಲೆ ಹಾದು ಹೋಗುತ್ತಿದ್ದು, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸಂಪೂರ್ಣ ಭೂ ಪರಿಹಾರ ಮೊತ್ತ ರೂ.90 ಲಕ್ಷಗಳನ್ನು ಪಾವತಿಸಲಾಗಿದೆ.<br><br>ಮದ್ದೂರು ತಾಲ್ಲೂಕಿನಲ್ಲಿ ರೂ. 305 ಲಕ್ಷಗಳನ್ನು ಮತ್ತು ಮಂಡ್ಯ ತಾಲ್ಲೂಕಿನಲ್ಲಿ ರೂ.405 ಲಕ್ಷಗಳ ಭೂ ಪರಿಹಾರವನ್ನು ನೀಡಲಾಗಿದೆ.<br><br>ಮದ್ದೂರು ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಭಾಗಶಃ ಭೂ ಪರಿಹಾರ ವಿತರಿಸಲು ಬಾಕಿ ಇರುವ ಭೂ ಮಾಲೀಕರ ಸಂಖ್ಯೆ 110 ಮತ್ತು ರೂ.45 ಲಕ್ಷಗಳ ಪರಿಹಾರ ಮೊತ್ತ ಪಾವತಿಸಲು ಬಾಕಿ ಇರುತ್ತದೆ. |

| | | |
|---|---|---|
| | | ಮದ್ದೂರು ತಾಲ್ಲೂಕಿನ ತೈಲೂರು, ಚನ್ನಸಂದ್ರ, ಮಂಡ್ಯ ತಾಲ್ಲೂಕಿನ ಬಿ.ಗೌಡಗೆರೆ, ಕನ್ನಲಿ, ಬೇಲೂರು, ಗೊರವನಹಳ್ಳಿ ಗ್ರಾಮಗಳ ಭೂ ಸರ್ವೆ ವರದಿಯು ಭಾಗಶಃ ನೀಡಿದ್ದು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಮದ್ದೂರು ಮತ್ತು ಮಂಡ್ಯ ತಾಲ್ಲೂಕು ರವರಿಂದ ಉಳಿದ ಸರ್ವೆ ನಂಬರ್‌ಗಳು ಭೂ ಸರ್ವೆ ಕಾರ್ಯವು ಪ್ರಗತಿಯಲ್ಲಿರುತ್ತದೆ.<br>ಜಿಲ್ಲಾಧಿಕಾರಿ, ಮಂಡ್ಯ ಮತ್ತು ತಹಶೀಲ್ದಾರ್, ಮದ್ದೂರು ರವರುಗಳು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಮತ್ತು ಆರಕ್ಷಕ ನಿರೀಕ್ಷಕರವರಿಗೆ ಸ್ಥಳ ಪರಿಶೀಲಿಸಿ ಉಳಿದ ಸರ್ವೆ ನಂಬರ್‌ಗಳ ಭೂ ಸರ್ವೆ ಕಾರ್ಯವನ್ನು ಜರೂರಾಗಿ ಮುಗಿಸಿ ವರದಿಯನ್ನು ನೀಡಲು ತಿಳಿಸಿರುತ್ತಾರೆ.<br>ಸಹಾಯಕ ನಿರ್ದೇಶಕರು, ಮದ್ದೂರು ಮತ್ತು ಮಂಡ್ಯ ತಾಲ್ಲೂಕು ರವರಿಂದ ಭೂ ದಾಖಲೆಗಳ ಸರ್ವೆ ವರದಿ ನೀಡಿದ ನಂತರ ಬಾಕಿ ಪರಿಹಾರವನ್ನು ನೀಡಲು ಕವಿಪ್ರನಿನಿ ವತಿಯಿಂದ ಕ್ರಮ ಜರುಗಿಸಲಾಗುವುದು. |

ಸಂಖ್ಯೆ: ಎನರ್ಜಿ 358 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು